doc-531
T.P÷2

Reg No B G 155 23—8—72

55th Year of Publication : 'Satyavadi' daily, Mysore 4

In State – The First
Golden Jubilee Celebrated Paper
★
News, Views, Dharmic Moral Ethical Matters

ಸತ್ಯವಾದಿ

ರಾಷ್ಟ್ರದಲ್ಲಿ ಪ್ರಥಮ
ಸುವರ್ಣ ಜಯಂತಿ
ಮಹೋತ್ಸವ
ಪೂರೈಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ತಮ್ಮ ಮಂತ್ರಿಮಂಡಲ ಭದ್ರವಿರುವುದಾಗಿ ಅರಸ್‌ರ ನುಡಿ

Srimat Sri Upendramohan Birth Centenary Celebrations

Srimat Sree Upendramohanji, Founder of the Shastra Dharma Prachara Sabha, was born at Hisahar near Calcutta, hundred years ago He is also the Founder of 'Truth' English Weekly and 'Bharatiira' Bengali Weekly His birth centenary is being celebrated at His Leela Niketan, 91 Chowringhee, Calcutta 20, for a fortnight, from the 11th August to the 21st August 1972.

The centenary will also be celebrated in other important branches of the Sabha during this year at Allahabad (U.P) Halsahar, Berhampora, Tamluk, Coochbehar (W. B), Arrah (Behar), Hyderabad, Honganur (Mysore) and Delhi etc

Public Meetings, discourses on the Founder's life and distribution of books will be some of the important feature of the Celebration

Special discourses will be held on every Sunday nearest to the Sukla Ashtami of the year 1972–73.

ವಾರ್ತಾವಿಶೇಷಗಳು

ಬರ್ನ್— ವಾರಕ್ಕೆ ಎರಡು ಘಂಟೆಯ ಪ್ರಕಾರ ಜರ್ಮನಿಯ ಪ್ರತಿಯೊಂದು ಹುಡುಗಿಯರ ಶಾಲೆಯಲ್ಲೂ ಆಟ ಸ್ಪರ್ಧೆಗಳು ಕಡ್ಡಾಯವಾಗಿವೆ ; ಇದರಿಂದ ಹುಡುಗಿಯರ ಆರೋಗ್ಯ, ವ್ಯಕ್ತಿತ್ವ ಪುನೋಬಲ ಹೆಚ್ಚಿದೆ ಎಂದು ದೇಹಾರೋಗ್ಯ ತರಬೇತು ಕೇಂದ್ರದ ಡೈರೆಕ್ಟರರು ಅಭಿಪ್ರಾಯಪಟ್ಟಿದಾರೆ.

ಬೊಂಬಾಯಿ— ಇಲ್ಲಿ ಶೇಕಡ 64 ಸಂಸಾರಗಳು 200 ಚದುರಡಿಗೂ ಕಡಮೆ ಸ್ಥಳಗಳಲ್ಲಿ ವಾಸಿಸುತ್ತಿರುವರು.

ಬೆಂಗಳೂರು— ವನ್ಯಜೀವಿಗಳ ಮತ್ತು ಪಕ್ಷಿಗಳ ರಕ್ಷಣೆ ಮತ್ತು ಆ ಸಂಬಂಧದ ಎಲ್ಲಾ ಕಾರ್ಯಗಳನ್ನು ಕೈಗೊಳ್ಳಲು ಪಾರ್ಲಿಮೆಂಟು ಶಾಸನ ಮಾಡಲು ಅಧಿಕಾರ ಕೊಡುವ ಠರಾವು ಈಚೆಗೆ ವಿಧಾನ ಪರಿಷತ್ತಿನಲ್ಲಿ ವಿಜಯವಾಯಿತು.

ನವದೆಹಲಿ— ದೇಶದಲ್ಲಿ ಪ್ರತಿ ಕಮ್ಯೂನಿಟಿ ಬ್ಲಾಕ್‌ನಲ್ಲಿ ಒಂದರಂತೆ 5000 ಜಯಂತಿ ಗ್ರಾಮಗಳನ್ನು ಕಟ್ಟಲು ನಿರ್ಧರಿಸಲಾಗಿದೆ.

ಅರಸ್‌ರವರ ನುಡಿ

ಭದ್ರಾವತಿ— ತಮ್ಮ ಪಾರ್ಟಿಯ ಚುನಾವಣಾ ಪ್ರತಿಜ್ಞೆಗಳನ್ನು ಶೀಘ್ರ ಜಾರಿಗೆ ತರುವದನ್ನು ಹಿತಾಸಕ್ತಿಯ ಜನರ ಒಂದು ಗುಂಪು ಸ್ವಾಗತ ನೀಡದೆ, ರಾಜ್ಯದ ಕಾಂಗ್ರೆಸ್ಸಿನಲ್ಲಿಯ ಐಕ್ಯತೆಗೆ ಭಂಗ ಉಂಟು ಮಾಡಲು ಹೊರಟಿರುವರೆಂದೂ, ಆದರೆ ಆ ಪ್ರಯತ್ನ ವಿಫಲವಾಗುವುದೆಂದೂ, ತಮ್ಮ ಮಂತ್ರಿಮಂಡಲಕ್ಕೆ ಏನೂ ಸಂಭವಿಸುವುದಿಲ್ಲವೆಂದೂ ಮುಖ್ಯಮಂತ್ರಿ ಶ್ರೀ ದೇವರಾಜ ಅರಸ್‌ರವರು ಹೇಳಿದರು.

★

ಭಾರಿ ಮೋಸ ಕಾರ್ಯ

ಬೊಂಬಾಯಿ— ಇಲ್ಲಿಯ ಹಾಫ್ಕೈನ್ ಇನ್‌ಸ್ಟಿಟ್ಯೂಟಿನ ಒಬ್ಬ ಸ್ಟೋರ್ ಕೀಪರು 3 ವರೆ ವರ್ಷಗಳಲ್ಲಿ ರೂ. 6 68 ಲಕ್ಷ ಬೆಲೆಯ ಔಷಧಗಳನ್ನು ದುರುಪಯೋಗ ಪಡಿಸಿಕೊಂಡಿರುವನೆಂದೂ, ಆವನು ಮತ್ತು ಅವನ ಜೊತೆಯವರು ಇಬ್ಬರನ್ನು ಸಸ್ಪೆಂಡು ಮಾಡಿ ತನಿಖೆ ನಡೆಸಲಾಗುತ್ತಿದೆಯೆಂದೂ ಶಾಸನಸಭೆಯಲ್ಲಿ ತಿಳಿಸಲಾಯಿತು.

●

ಭೂಗರ್ಭದಲ್ಲಿ ಪ್ರೇಮ ಸಂಜರದಲ್ಲಿ ನೂತನ ದಂಪತಿಗಳ ಮಧುಚಂದ್ರ

ಲಂಡನ್— ಬಿಲ್ ವುಡ್ ಮತ್ತು ಜ್ಞವಿ ಕಾಂಬೆಲ್ ದಂಪತಿಗಳು ತಮ್ಮ ಸುಖ ಭೋಗವನ್ನು 2.7 ಮಿಟರು ಆಳದ ಭೂಮಿಯಲ್ಲಿ ಶವದಪೆಟ್ಟಿಗೆಯಂತರ ಪ್ರೇಮ ಸಂಜರದಲ್ಲಿ ಕಳೆಯಲಿರುವರು : ಅಲ್ಲಿ ಅವರು ಎರಡು ವಾರಗಳಿರುವರೆನ್ನಲಾಗಿದೆ : ಅವರಿಗೆ ಆಹಾರ ತಲಪಿಸುವ ಮತ್ತು ಅವರಿಂದ ವರ್ತಮಾನ ತಿಳಿಯುವ ಏರ್ಪಾಡು ಇರುವುದು.

★ ಮೈಸೂರು— ಕೇರಳದ ಗಡಿ ಹತ್ತಿರ ಆರಣ್ಯ ಸಂಚಾರಿ ತಂಡವು ರೂ 10000 ಬೆಲೆಯ 1 ಟ್ಗ ಗಂಧದಮರವನ್ನು ವಶಪಡಿಸಿಕೊಂಡಿದೆ.

ಹಿಂಸಾ ಕೃತ್ಯ

ಬೊಂಬಾಯಿ— ಮುಷ್ಕರಕ್ಕೆ ತುತ್ತಾಗಿರುವ ಬೊಂಬಾಯಿನಲ್ಲಿ ನಿನ್ನೆ ಆದ ಹಿಂಸಾ ಕೃತ್ಯಗಳಿಂದ 20 ಮಂದಿ ಗಾಯಗೊಂಡರು ; ಕಸ ಸಾಗಿಸುವ 3 ಲಾರಿಗಳು ಸುಡಲ್ಪಟ್ಟವು.

★

ರಷ್ಯಾಕ್ಕೆ ಮಾವಿನಹಣ್ಣಿನ ರಸ

ಮಡಕೇರಿ— ಸ್ಟೇಟ್ ಟ್ರೇಡಿಂಗ್ ಕಂಪೆನಿಯ ಮೂಲ್ಕ ಕುಶಾಲ್ ಹಣ್ಣು ಕಾರ್ಖಾನೆ ರಷ್ಯಾ 50ಟ್ಗ ಮಾವಿನಹಣ್ಣಿನ ರಸಕ್ಕೆ ಆರ್ಡರು ಕೊಟ್ಟಿದೆ.

★

ಮಾಜಿ ರಾಜರಿಗೆ ಸಾವತಿ ಮಾಡಲು

ನವದೆಹಲಿ— ಮಾಜ ರಾಜರಿಗೆ ತಾತ್ಕಾಲಿಕವಾಗಿ ಹಣಸಾವತಿಗಾಗಿ ಲೋಕಸಭೆಯಲ್ಲಿ 72–73 ರ ಗ್ರಾಂಟುಗಳಲ್ಲಿ ರೂ 10.70 ಕೋಟಿ ಕೇಳಿಕೆ ಇದೆ.

○

ಮೊಟ್ಟೆ ಹಾಕುವದಕ್ಕೆ ಮುಂಚೆ ಎಣಿಕೆ

ನವದೆಹಲಿ– 1978 ರಲ್ಲಿ 800000 ಪ್ರವಾಸಿಕರು ಬರುವ ಮತ್ತು ತನ್ಮೂಲಕ ರೂ 100 ಕೋಟಿ ವಿದೇಶಿ ವಿನಿಮಯ ದೊರೆಯುವದೆಂದೂ ಸ್ಟೇಟ್ ಪ್ರವಾಸ ಮಂತ್ರಿ ಡಾ॥ ಸರೋಜಿನಿ ಮಹಿಷಿ ರಾಜ್ಯಸಭೆಯಲ್ಲಿ ಹೇಳಿದರು.

★

ಆಹಾರಧಾನ್ಯ ಆಮದಿಲ್ಲ

ನವದೆಹಲಿ— ಅನುಕೂಲಕಾದ ಪಿ ಎಲ್ 480 ರೀತ್ಯಾ ಆಹಾರಧಾನ್ಯವೇನನ್ನೂ ಆಮದು ಮಾಡಿಕೊಳ್ಳುವುದಿಲ್ಲವೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

★ ಖಟ್ಮಂಡು— 11 ದಿನಗಳಿಂದ ನಡೆಯುತ್ತಿರುವ ವಿದ್ಯಾರ್ಥಿಗಳ ಚಳವಳಕ್ಕಾಗಿ ನೇಪಾಳ ಏಕಮಾತ್ರವಾದ ತ್ರಿಭುವನ ವಿಶ್ವವಿದ್ಯಾನಿಲಯ ಮುಚ್ಚಲ್ಪಟ್ಟಿತು.

ಮಿತಾಹಾರದಿಂದ ಆಯುಸ್ಸು ವೃದ್ಧಿ

ಫೆಡರಲ್ ರಿಪಬ್ಲಿಕ್ ಜರ್ಮನಿಯ ಉರ್ಸ್ಬರ್ಗ್‌ನಲ್ಲಿ ನಡೆದ ನ್ಯೂಟ್ರಿಷಿಯರ್ ಸ್ರವೀಣರ ಸಮಾವೇಶದಲ್ಲಿ ಮಾನವನು ತನ್ನ ಆಹಾರ ಪದ್ಧತಿಯನ್ನು ಬದಲಾಯಿಸಿಕೊಂಡರೆ ಉತ್ತಮನೆಂದೂ, ಆಹಾರ ಮಿತಿಯನ್ನು ಕಡಮೆ ಮಾಡುವುದರಿಂದ ಆರೋಗ್ಯವೂ ಆಯುಸ್ಸೂ ವೃದ್ಧಿಗೊಳ್ಳುವುದೆಂದೂ ಅಭಿಸ್ರಾಯಪಟ್ಟಿದ್ದಾರೆ.

ಓವ್ಯವಾಣಿ

ತಂತ್ರಿವಾದ್ಯವು ಲೇಸು, ಮಂತ್ರಿಯಾ ಕೆಳೆ ಲೇಸು, ಯಂತ್ರವಾಹಕನ ದಯೆ ಲೇಸು ಜಗದಿ ಸ್ವಾತಂತ್ರ್ಯವೇ ಲೇಸು ಸರ್ವಜ್ಞ. — ಸರ್ವಜ್ಞ ಕವಿ.

ವಿಧಾನ ಪರಿಷತ್ತು ವಜಾ ಇಲ್ಲ

ಬೆಂಗಳೂರು— ವಿಧಾನ ಪರಿಷತ್ತನ್ನು ರದ್ದು ಪಡಿಸಬೇಕೆಂದು ಶ್ರೀ ಕೋಣಂದೂರು ಲಿಂಗಪ್ಪನವರು ವಿಧಾನಸಭೆಯಲ್ಲಿ ತಂದಿದ್ದ ಠರಾವು ಹೆಚ್ಚು ಮತದಿಂದ ತಿರಸ್ಕೃತವಾಯಿತು.

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್ 18-8-72 ರಿಂದ ಆಮೋಘ 16ನೇ ವಾರ

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ

ನಿರ್ದೇಶನ : ರಾಶಿ ಸಹೋದರರು ನಿರ್ಮಾಪಕರು : ಎಂ ಜಿ ಎಂ ಸಹೋದರರ

ದಿನ 3 - ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30

ಮಂತ್ರಾಲಯ ಮಹಾತ್ಮೆ ಅಥವಾ ರಾಘವೇಂದ್ರ ವಿಜಯ

ಅಪೂರ್ವ 2 ನೇ ವಾರ

— ಅತ್ಯನೋಪೆ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

ಲಾಲ್ ಪತ್ತರ್

ಪ್ರತಿ ದಿನ 3 ಪ್ರದರ್ಶನಗಳು

ಪಾತ್ರ — ರಾಜ್ ಕುಮಾರ್, ಹೇಮಾಮಾಲಿನಿ, ರಾಖಿ, ವಿನೋದ್ ಮೆಹ್ರಾ

Edited Printedand Published by Dharmapracharanirata M S Krishna Rao (Propretor) at the Satvavadi Press Chamarajapuram Mysore

For Rugs, Sweaters and Kashmir Coats Visit Bank Road Bahusar

"ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯಕ್ಕೆ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈದೇಶ ಹೊತ್ತ ಚಿತ್ರ ಸಂದೇಶ ರವರ ಜೊಚ್ಚಲು ಚಿತ್ರ

★

ಆನೆ - ಹುಡುಗ

ಅಖಿಲ ಭಾರತದಲ್ಲಿ ಕೂಡಲೇ



ಗೋವಧೆ ನಿಷೇಧವಾಗಲಿ

Potect the Cow

Help The Goakshana

— Humanitarian Propoganda Monthly ....

Contribute Liberally to the National Defence Fund

Quality Printing Neat Binding

Lakshminarasimha Press

Sivarampet, Mysore